# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2537 |
| ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 24.03.2022. |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಸಿಲ್ಕ್ ಬೋರ್ಡ್‌ನಿಂದ ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ ಮೇಲು ರಸ್ತೆಯ ಪಿಲ್ಲರ್ ಸಂಖ್ಯೆ 20 ಮತ್ತು 21ರ ನಡುವಿನ ರಾಷ್ಟ್ರೀಯ ಹೆದ್ದಾರಿಯ 7 ರ ನಡುವಿನ ರಸ್ತೆ ವಿಭಾಜಕಗಳನ್ನು ತೆರವುಗೊಳಿಸಿದ ಬಳಿಕ ಈ ಪ್ರದೇಶದಲ್ಲಿ ಆದ ಅಪಘಾತಗಳ ಸಂಖ್ಯೆ ಎಷ್ಟು ; ಇದರಿಂದ ಪ್ರಾಣ ಹಾನಿ ಮತ್ತು ಶಾಶ್ವತ ಅಂಗವಿಕಲರಾದವರ ಸಂಖ್ಯೆ ಎಷ್ಟು ; | ಸಿಲ್ಕ್‌ಬೋರ್ಡ್‌ನಿಂದ ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ ಮೇಲು ರಸ್ತೆಯ ಪಿಲ್ಲರ್ ಸಂಖ್ಯೆ 20 ಮತ್ತು 21ರ ನಡುವಿನ ರಾಷ್ಟ್ರೀಯ ಹೆದ್ದಾರಿಯ 7ರ ನಡುವಿನ ರಸ್ತೆ ವಿಭಜಕಗಳನ್ನು ತೆರವುಗೊಳಿಸಿದ ಬಳಿಕ ಈ ಪ್ರದೇಶದಲ್ಲಿ ಆದ ಅಪಘಾತಗಳ ವಿವರ ಈ ಕೆಳಕಂಡಂತಿರುತ್ತದೆ.<br>ಸಂಭವಿಸಿರುವ ಅಪಘಾತಗಳ ಸಂಖ್ಯೆ: 01<br>ಮೃತರ ಸಂಖ್ಯೆ: 01<br>ಶಾಶ್ವತ ಅಂಗವಿಕಲರಾದವರ ಸಂಖ್ಯೆ: – |
| (ಆ) | ಖಾಸಗಿ ಬಿಲ್ಡರ್ ನೀಡಿದ ಲಂಚದ ಆಸೆಗಾಗಿ ಜನಸಾಮಾನ್ಯರ ಪ್ರಾಣದೊಂದಿಗೆ ಚೆಲ್ಲಾಟವಾಡುತ್ತಿರುವ ಮಡಿವಾಳ ಸಂಚಾರ ಪೊಲೀಸ್ ನಿರೀಕ್ಷಕರು, ಸಂಬಂಧಿತ ಪೊಲೀಸ್ ಉಪ ಆಯುಕ್ತರು ಹಾಗೂ ಪೊಲೀಸ್ ಸಹಾಯಕ ಆಯುಕ್ತರು ಮೇಲೆ ಕೈಗೊಂಡ ಕ್ರಮಗಳೇನು; ಈ ಪ್ರದೇಶದಲ್ಲಿ ಯಾವುದೇ ವ್ಯಕ್ತಿಯ ಪ್ರಾಣ ಹಾನಿಯಾದಲ್ಲಿ ಅದನ್ನು ಉದ್ದೇಶ ಪೂರ್ವಕ ಕೊಲೆ ಎಂಬುದಾಗಿ ಪರಿಗಣಿಸಿ ಈ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಕ್ರಮ ಕೈಗೊಳ್ಳಲಾಗುವುದೆ; ಈ ಬಗ್ಗೆ ಸರ್ಕಾರದ ನಿಲುವೇನು; | • ರಾಷ್ಟ್ರೀಯ ಹೆದ್ದಾರಿ-7ರ ನಡುವಿನ ರಸ್ತೆ ವಿಭಜಕಗಳನ್ನು ಪೊಲೀಸ್ ಇಲಾಖೆಯಿಂದ ತೆರವುಗೊಳಿಸಿರುವುದಿಲ್ಲ.<br>• ರಸ್ತೆ ಸುರಕ್ಷತಾ ಸಮಿತಿಯಲ್ಲಿ ಕೈಗೊಂಡ ನಿರ್ಣಯದಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ತೆರವು ಗೊಳಿಸಲಾಗಿರುತ್ತದೆ.<br>• ರಸ್ತೆ ವಿಭಜಕಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ತೆರವುಗೊಳಿಸಿರುವುದರಿಂದ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವವಾಗುವುದಿಲ್ಲ.<br>• ರಸ್ತೆ ವಿಭಜಕಗಳನ್ನು ತೆರವುಗೊಳಿಸಿದ ಬಳಿಕ ಸಾರ್ವಜನಿಕ ಸುಗಮ ಸಂಚಾರದ ಹಿತದೃಷ್ಟಿಯಿಂದ ಅಗತ್ಯ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜಿಸಿ ಸೂಕ್ತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ಈ ಪ್ರದೇಶದಲ್ಲಿ ಅಪಘಾತಗಳು ಸಂಭವಿಸಿದ್ದಲ್ಲಿ, ಕಾನೂನು ರೀತ್ಯಾ ಅಪಘಾತ ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. |
| (ಇ) | ಪಿಲ್ಲರ್ ಸಂಖ್ಯೆ 20 ಮತ್ತು 21ರ ನಡುವಿನ ರಾಷ್ಟ್ರೀಯ ಹೆದ್ದಾರಿಯ 7ರ ನಡುವಿನ ರಸ್ತೆ ವಿಭಾಜಕಗಳನ್ನು ಪೊಲೀಸ್ ಇಲಾಖೆ ವತಿಯಿಂದ ತೆರವುಗೊಳಿಸಲಾಗಿದೆಯೆಂದು ಈ ಹಿಂದೆ ಸದನದಲ್ಲಿ ಭರವಸೆ ನೀಡಿದ್ದು, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | • ರಾಷ್ಟ್ರೀಯ ಹೆದ್ದಾರಿ-7ರ ನಡುವಿನ ರಸ್ತೆ ವಿಭಜಕಗಳನ್ನು ಪೊಲೀಸ್ ಇಲಾಖೆಯಿಂದ ತೆರವುಗೊಳಿಸಿರುವುದಿಲ್ಲ.<br>• ರಸ್ತೆ ಸುರಕ್ಷತಾ ಸಮಿತಿಯಲ್ಲಿ ಕೈಗೊಂಡ ನಿರ್ಣಯದಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ತೆರವುಗೊಳಿಸಲಾಗಿರುತ್ತದೆ.. |

ಹೆಚ್‌ಡಿ 149 ಎಸ್‌ಎಸ್‌ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು